# ರಾಜ್ಯ ಶೈಕ್ಷಣಿಕ ಸಂಶೋಧನ ಹಾಗೂ ಪ್ರಶಿಕ್ಷಣ ಪರಿಷದ್, ಮಹಾರಾಷ್ಟ್ರ, ಪುಣೆ

## ನಿಪುಣ ಭಾರತ - ಅಧ್ಯಯನ ಅಭ್ಯಾಸ ಸರ್ವೇಕ್ಷಣ

## ವಿಷಯ - ಪ್ರಥಮ ಭಾಷೆ (ಕನ್ನಡ) : ನಾಲ್ಕನೆಯ ಇಯತ್ತೆ

**ಅಧ್ಯಯನ ನಿಷ್ಪತ್ತಿ ಕ್ರ. ೧ :** ಪರಿಚಿತವಾದ ಸಂಗತಿ ಯಾವ ಪ್ರಕಾರ ಕಥೆ/ಕವಿತೆ ಇತ್ಯಾದಿ ವಿಷಯಗಳ ಸಂಭಾಷಣೆ ಮಾಡುವದು, ಪ್ರಶ್ನೆ ಕೇಳುವದು, ವಿಷಯ, ಚಿತ್ರ, ಪಾತ್ರಗಳ ಬಗ್ಗೆ ಅಭಿಪ್ರಾಯ ವ್ಯಕ್ತ ಮಾಡುವದು.

**ಶಿಕ್ಷಕರ ಸಲುವಾಗಿ ಸೂಚನೆ :**

- ಶಿಕ್ಷಕರು ಕವಿತೆಯನ್ನು ಸ್ವರಯುಕ್ತವಾಗಿ ಹಾಗೂ ಲಯಬದ್ಧವಾಗಿ ಹಾಡಿ ತೋರಿಸಬೇಕು.
- ಕವಿತೆ ವಾಚನ ಮಾಡುವ ಮೊದಲು ಮಕ್ಕಳಿಗೆ ಸೂಚನೆ ಕೊಡಿರಿ. ಕವಿತೆ ಲಕ್ಷ್ಯಪೂರ್ವಕವಾಗಿ ಕೇಳಿರಿ ಹಾಗೂ ಕವಿತೆಯ ಮೇಲೆ ಆಧರಿಸಿದ ಪ್ರಶ್ನೆಗಳನ್ನು ಕೇಳುತ್ತೇನೆ ಎಂದು ಹೇಳಿರಿ.
- ಪ್ರತಿಯೊಬ್ಬ ವಿದ್ಯಾರ್ಥಿಗೆ ಕವಿತೆ ಸ್ವತಂತ್ರವಾಗಿ ಹಾಡಿ ತೋರಿಸಿರಿ ಹಾಗೂ ನಂತರ ಆ ಕವಿತೆಯ ಮೇಲೆ ಆಧರಿಸಿದ ಮುಂದೆ ಕೊಟ್ಟ ಪ್ರಶ್ನೆಗಳನ್ನು ಕೇಳಿರಿ.
- ಒಂದು ಪ್ರಶ್ನೆಗೆ ಉತ್ತರ ಕೊಡುವ ಸಲುವಾಗಿ ವಿದ್ಯಾರ್ಥಿಗೆ ೧೦ ಸೆಕೆಂದಿನ ಸಮಯ ಕೊಡಿರಿ. ಒಂದು ವೇಳೆ ಯಾವುದೇ ಒಬ್ಬ ವಿದ್ಯಾರ್ಥಿ ಪ್ರಶ್ನೆಗಳಿಗೆ ಉತ್ತರ ೧೦ ಸೆಕೆಂದುಗಳಲ್ಲಿ ಕೊಡದಿದ್ದಲ್ಲಿ ಆತನಿಗೆ ಮುಂದಿನ ಪ್ರಶ್ನೆಗಳನ್ನು ಕೇಳಿರಿ.

**ಕವಿತೆ ವಾಚನ :**

ಭಾರತ ಮಾತೆಯ ಹೆಮ್ಮೆಯ ತನುಜ, ಸ್ನೇಹದಿ ಕರೆವರು ಉಕ್ಕಿನ ಮನುಜ.

ಎಲ್ಲರ ಗೆಲ್ಲುವ ಮಾತಿನ ಮೋಡಿ, ಯತ್ನದಿ ಕಳಚಿತು ಬಂಧನ ಬೇಡಿ.

ಬಯಸಿದೆ ಅನುದಿನ ದೇಶದ ಐಕ್ಯ, ಜನತೆಗೆ ನೀಡಲು ಸಂತತ ಸೌಖ್ಯ.

ವಜ್ರದ ತೆರದಲಿ ನಿರ್ಣಯ ಮಾಡಿ, ಅರಸರ ಅಟ್ಟಲು ಹೋದರು ಓಡಿ.

ಎಲ್ಲರ ನೆಚ್ಚಿನ ವಲ್ಲಭಭಾಯಿ, ಜನುಮವ ನೀಡಲಿ ಭಾರತ ತಾಯಿ.

| ಪ್ರಶ್ನೆ | ಉತ್ತರ |
|---|---|
| ೧) ಕವಿತೆಯಲ್ಲಿ ಯಾರ ವರ್ಣನೆ ಮಾಡಲಾಗಿದೆ ? | ಉಕ್ಕಿನ ಮನುಜ (ವಲ್ಲಭಭಾಯಿ) |
| ೨) ವಲ್ಲಭಭಾಯಿಯವರನ್ನು ಸ್ನೇಹದಿಂದ ಏನೆಂದು ಕರೆಯುವರು ? | ಉಕ್ಕಿನ ಮನುಜ |
| ೩) ಅವರು ಅನುದಿನ ಏನನ್ನು ಬಯಸಿದರು ? | ದೇಶದ ಐಕ್ಯತೆ |
| ೪) ಅವರು ಯಾವ ತೆರದಲ್ಲಿ ನಿರ್ಣಯ ಮಾಡುತ್ತಿದ್ದರು ? | ವಜ್ರದ ತೆರದಲ್ಲಿ ನಿರ್ಣಯ ಮಾಡುತ್ತಿದ್ದರು. |
| ೫) ಭಾರತ ಮಾತೆ ಯಾರ ಜನುಮವ ನೀಡಲಿ ? | ವಲ್ಲಭಭಾಯಿಯವರ |

**ಮೂಲ್ಯಮಾಪನದ ರುಬ್ರಿಕ**

| ವಿವರಣೆ | ಶ್ರೇಣಿ |
|---|---|
| ಕವಿತೆ ಕೇಳಿದ ನಂತರ ೪ ರಿಂದ ೫ ಪ್ರಶ್ನೆಗಳಿಗೆ ಯೋಗ್ಯ ಉತ್ತರ ಕೊಡುತ್ತಾನೆ/ಳೆ. | ೩ |
| ಕವಿತೆ ಕೇಳಿದ ನಂತರ ೪ ರಿಂದ ೩ ಪ್ರಶ್ನೆಗಳಿಗೆ ಯೋಗ್ಯ ಉತ್ತರ ಕೊಡುತ್ತಾನೆ/ಳೆ. | ೨ |
| ಕವಿತೆ ಕೇಳಿದ ನಂತರ ಕೇವಲ ಒಂದೇ ಪ್ರಶ್ನೆಗೆ ಯೋಗ್ಯ ಉತ್ತರ ಕೊಡುತ್ತಾನೆ/ಳೆ. | ೧ |
| ಕವಿತೆ ಕೇಳಿದ ನಂತರ ಪ್ರಶ್ನೆಗಳಿಗೆ ಉತ್ತರ ಕೊಡಲು ಸಂಕುಚಿತಗೊಳ್ಳುತ್ತಾನೆ ಅಥವಾ ಯಾವುದೇ ಪ್ರಶ್ನೆಗಳಿಗೆ ಯೋಗ್ಯ ಉತ್ತರ ಕೊಡಲಾಗುವುದಿಲ್ಲ. | ೦ |

**ಅಧ್ಯಯನ ನಿಷ್ಪತ್ತಿ ಕ್ರ. ೨ :** ಪರಿಸರದಲ್ಲಿಯ ಕಥೆ, ಕವಿತೆಗಳ ಬಗ್ಗೆ ತಾಸು ತೆಗೆದುಕೊಂಡು ಅನುಭವದ ಬಗ್ಗೆ ಮಾತನಾಡುತ್ತಾನೆ. ಮಾಧ್ಯಮದ ಭಾಷೆಯಲ್ಲಿ ಅಥವಾ ಸ್ವತ:ದ ಭಾಷೆಯಲ್ಲಿ ಪರಿಸರದಲ್ಲಿಯ ಘಟನೆಗಳ ಬಗ್ಗೆ ಮಾತನಾಡುತ್ತಾನೆ.

**ಶಿಕ್ಷಕರ ಸಲುವಾಗಿ ಸೂಚನೆ :**

- ಶಿಕ್ಷಕರು ಮಕ್ಕಳ ಕೈಯಲ್ಲಿ ಚಿತ್ರಗಳ ಕಾರ್ಡಶೀಟ ಕೊಡಬೇಕು. ಅದನ್ನು ಮಕ್ಕಳಿಗೆ ಸೂಕ್ಷ್ಮವಾಗಿ ನಿರೀಕ್ಷಣೆ ಮಾಡಲು ಹೇಳುವದು.
- ಮಕ್ಕಳಿಗೆ ಚಿತ್ರ ನೋಡುವ ಸಲುವಾಗಿ ಅದೇ ಪ್ರಕಾರ ವಾಕ್ಯಗಳ ಹೊಂದಾಣಿಕೆ ಮಾಡುವ ಸಲುವಾಗಿ ಹೆಚ್ಚೆಂದರೆ ಒಂದು ನಿಮಿಷದ ಸಮಯ ಅವಕಾಶ ಕೊಡಿರಿ.
- ನಿರೀಕ್ಷಣೆಯ ನಂತರ ನಾಲ್ಕರಿಂದ ಐದು ವಾಕ್ಯಹೇಳಿರಿ.



**ಮೂಲ್ಯಮಾಪನದ ರುಬ್ರಿಕ :**

| ವಿವರಣೆ | ಶ್ರೇಣಿ |
|---|---|
| ಚಿತ್ರದಲ್ಲಿಯ ಎಲ್ಲ ವಿಷಯ ಲಕ್ಷ್ಯದಲ್ಲಿ ತೆಗೆದುಕೊಂಡು ೪ ರಿಂದ ೫ ವಾಕ್ಯಗಳನ್ನು ಹೇಳುವದು. | ೩ |
| ಚಿತ್ರದಲ್ಲಿಯ ಎಲ್ಲ ವಿಷಯ ಲಕ್ಷ್ಯದಲ್ಲಿ ತೆಗೆದುಕೊಂಡು ೨ ರಿಂದ ೩ ವಾಕ್ಯಗಳನ್ನು ಹೇಳುವದು. | ೨ |
| ಚಿತ್ರ ಯಾವುದರ ಬಗ್ಗೆ ಇದೆ ಎಂಬುದನ್ನು ಹೇಳುವದು. | ೧ |
| ಏನೂ ಹೇಳಲು ಬರುವದಿಲ್ಲ. | ೦ |

**ಅಧ್ಯಯನ ನಿಷ್ಪತ್ತಿ ಕ್ರ. ೩ :** ಕುಟುಂಬದಲ್ಲಿಯ ಚರ್ಚೆ, ವಾದ-ವಿವಾದದ ಬಗ್ಗೆ ಮಾತನಾಡುತ್ತಾನೆ. ಅವನಿಗೆ ಹಿಡಿಸಿದ ಕೃತಿಯ ದರ್ಶಕ ಫಲಕ ಯೋಗ್ಯ ಗತಿಯಿಂದ, ಯೋಗ್ಯ ಉಚ್ಚಾರ ಸಹಿತವಾಗಿ ಗೊತ್ತಾದ ಪರಿಚ್ಛೇದ ಓದುತ್ತಾನೆ.

**ಶಿಕ್ಷಕರ ಸಲುವಾಗಿ ಸೂಚನೆ :**

- ಶಿಕ್ಷಕರು ಮಕ್ಕಳಿಗೆ ಪರಿಚ್ಛೇದ ಇರುವ ಕಾರ್ಡಶೀಟ ವಾಚನ ಮಾಡುವ ಸಲುವಾಗಿ ಕೊಡಿರಿ.
- ವಿದ್ಯಾರ್ಥಿಗಳಿಗೆ ಪರಿಚ್ಛೇದವನ್ನು ಕಾಳಜಿಯಿಂದ ವಾಚನ ಮಾಡಲು ಹೇಳಿರಿ ಹಾಗೂ ಪರಿಚ್ಛೇದ ವಾಚನ ಮಾಡಿದ ನಂತರ ಪ್ರಶ್ನೆ ಕೇಳುತ್ತೇನೆ ಎಂದು ಸೂಚನೆ ಕೊಡಿರಿ.
- ವಿದ್ಯಾರ್ಥಿ ಒಂದು ಶಬ್ದ ವಾಚನ ಮಾಡಲು ೫ ಸೆಕೆಂದುಗಳಿಗಿಂತಲೂ ಹೆಚ್ಚಿನ ಸಮಯದಲ್ಲಿ ನಿಲ್ಲುತ್ತಿದ್ದರೆ ಆತನಿಗೆ ಮುಂದಿನ ಶಬ್ದ ವಾಚನ ಮಾಡಲು ಹೇಳಿರಿ.

**ಚಿಹ್ನೆಗಳ ಗುರುತು :**

೧) ತಪ್ಪು ವಾಚನ ಮಾಡಿದ ಅಥವಾ ವಾಚನ ಮಾಡದೇ ಇರುವ ಶಬ್ದ (/) ಈ ಚಿಹ್ನೆಯಿಂದ ಚಿಹ್ನಾಂಕಿತ ಮಾಡಿರಿ.

೨) ಯೋಗ್ಯ ಪ್ರಕಾರವಾಗಿ ವಾಚನ ಮಾಡಿದ (∅) ಈ ಪ್ರಕಾರವಾದ ಚಿಹ್ನಾಂಕಿತ ಮಾಡಿರಿ.

**ಪರಿಚ್ಛೇದ ವಾಚನ :**

ಆಷಾಢ ಮಾಸದ ಪ್ರತಿ ಮಂಗಳವಾರ ಗುಳ್ಳವ್ವನ ಹಬ್ಬ ಆಚರಿಸುತ್ತಾರೆ. ಚಿಕ್ಕ ವಯಸ್ಸಿನ ಮಕ್ಕಳು ಏನಾದರೊಂದು ತಿನಿಸು ಕಟ್ಟಿಕೊಂಡು ಅರಲು ತರುವುದಕ್ಕೆ ಹಳ್ಳದ ಕಡೆಗೆ ಹೋಗುತ್ತಾರೆ. ಉತ್ತಮವಾದ ಅರಲನ್ನು ಕೆದರಿಕೊಂಡು ಅದನ್ನು ಚೆನ್ನಾಗಿ ಮಿದ್ದಿಕೊಂಡು ಒಂದು ಉಂಡೆ ಮಾಡಿ ತಿದ್ದಿ ತೀಡುತ್ತಾರೆ. ಅಲ್ಲಿಯೇ ಸಮೀಪದಲ್ಲಿ ಸಿಗುವ ನಾಲ್ಕು ಕಾಡು ಹೂಗಳನ್ನು ತಂದು ಆ ಅರಲಿನ ಮುದ್ದೆಗೆ ಸಿಕ್ಕಿಸುತ್ತಾರೆ. ಊದಿನ ಕಡ್ಡಿ ಬೆಳಗುತ್ತಾರೆ. ಆ ಬಳಿಕ ಮನೆಯಿಂದ ತಂದ ಚುರಮುರಿ, ಪುಟಾಣಿ, ನೆಲಗಡಲೆ, ಬೆಲ್ಲ ಮುಂತಾದ ತಿನಿಸನ್ನು ನೈವೇದ್ಯ ಮಾಡುತ್ತಾರೆ. ನಂತರ ಆ ನೈವೇದ್ಯವನ್ನು ತಿಂದು ನೀರು ಕುಡಿದರೆ ಅಲ್ಲಿಯ ಕೆಲಸ ಮುಗಿದಂತಾಗುವದು. ನಂತರ ಆ ಅರಲನ್ನು ಹೊತ್ತುಕೊಂಡು ಹಾಡುತ್ತ ಮನೆಯ ಕಡೆಗೆ ಬರುವರು.

೧) ವಿದ್ಯಾರ್ಥಿಗಳು ತಪ್ಪದೇ ಸರಿಯಾಗಿ ವಾಚನ ಮಾಡಿದ ಶಬ್ದಗಳ ಸಂಖ್ಯೆ ......../ ೭೦.

೨) ವಾಚನ ಪೂರ್ಣ ಮಾಡುವ ಸಲುವಾಗಿ ಬೇಕಾಗುವ ಕಾಲಾವಧಿ ............ ಸೆಕೆಂದುಗಳು.

**ಮೌಲ್ಯಮಾಪನದ ರುಬ್ರಿಕ :**

| ವಿವರಣೆ | ಶ್ರೇಣಿ |
|---|---|
| ನಿರ್ಧಾರಿತ ಕಾಲಾವಧಿಯಲ್ಲಿ ೫೦ ರಿಂದ ೬೦ ಸುಸ್ಪಷ್ಟವಾದ ಉಚ್ಚಾರ ಯೋಗ್ಯ ಗತಿಯಲ್ಲಿ ಮತ್ತು ಹ್ರಸ್ವ ದೀರ್ಘಗಳೊಂದಿಗೆ ವಿರಾಮ ಚಿಹ್ನೆಗಳ ಸಹಿತ ವಾಚನ. | ೩ |
| ನಿರ್ಧಾರಿತ ವೇಳೆಯಲ್ಲಿ ಸುಸ್ಪಷ್ಟವಾದ ಉಚ್ಚಾರ ಯೋಗ್ಯ ಗತಿಯಲ್ಲಿ ಮತ್ತು ಸ್ವತ: ಪ್ರಯತ್ನದಿಂದ ಸುಧಾರಿಸಿಕೊಂಡು ಶಬ್ದ ಜೋಡಿಸಿಕೊಂಡು ವಾಚನ. | ೨ |
| ನಿರ್ದಿಷ್ಟ ಸಮಯಕ್ಕಿಂತಲೂ ಹೆಚ್ಚಿನ ವೇಳೆಯಲ್ಲಿ ಶಬ್ದ ಅಥವಾ ಅಕ್ಷರಗಳನ್ನು ಬಿಡಿಸಿ ತಡೆಯುತ್ತ ವಾಚನ. | ೧ |
| ಏನೂ ಸರಿಯಾಗಿ ವಾಚನ ಮಾಡುವದಿಲ್ಲ ಅಥವಾ ಏನೂ ಮಾತನಾಡುವದಿಲ್ಲ. | ೦ |

**ಅಧ್ಯಯನ ನಿಷ್ಪತ್ತಿ ಕ್ರ. ೪ :** ಪರಿಚಿತವಿರುವ ಘಟಕದಲ್ಲಿಯ ಹಾಗೂ ಕಥೆಗಳ ಸಂದರ್ಭದಲ್ಲಿ ಅವರು ತಮ್ಮ ಅಭಿಪ್ರಾಯ ಮಂಡಿಸುತ್ತಾರೆ.

**ಶಿಕ್ಷಕರ ಸಲುವಾಗಿ ಸೂಚನೆ :**

- ಯಾವಾಗ ವಿದ್ಯಾರ್ಥಿ ಪರಿಚ್ಛೇದ ಓದುವುದನ್ನು ನಿಲ್ಲಿಸಿದರೆ, ಆಗ ಅವರ ಮುಂದಿನ ಪರಿಚ್ಛೇದ ತೆಗೆಯಬೇಡಿರಿ.
- ಒಬ್ಬ ವಿದ್ಯಾರ್ಥಿ ಪರಿಚ್ಛೇದ ವಾಚನ ಮಾಡಿದರೆ, ಆ ಪರಿಚ್ಛೇದಕ್ಕೆ ಸಂಬಂಧಿಸಿದ ಒಂದು-ಒಂದು ಪ್ರಶ್ನೆ ಕೇಳಿರಿ.
- ಒಂದು ವೇಳೆ ವಿದ್ಯಾರ್ಥಿಯು ೧೫ ಸೆಕೆಂದುಗಳಲ್ಲಿ ಉತ್ತರಿಸಲು ಅಸಮರ್ಥವಾದರೆ ಆ ಪ್ರಶ್ನೆಯ ಸಲುವಾಗಿ ವಿದ್ಯಾರ್ಥಿಯು ಉತ್ತರಿಸಲಿಲ್ಲ ಎಂದು ಚಿಹ್ನಾಂಕಿತ ಮಾಡಿರಿ ಮತ್ತು ಮುಂದೆ ಸಾಗಿರಿ.
- ಪ್ರಶ್ನೆಗಳನ್ನು ಎರಡು ಬಾರಿಗಿಂತಲೂ ಹೆಚ್ಚಿಗೆ ಕೇಳಬೇಡಿರಿ. ಒಂದು ವೇಳೆ ವಿದ್ಯಾರ್ಥಿಯು ನನಗೆ ಗೊತ್ತಿಲ್ಲ ಎಂದರೆ ಪರ್ಯಾಯ ೦/ ತಪ್ಪು ಎಂದು ಚಿಹ್ನಾಂಕಿತ ಮಾಡಿರಿ.

| ಪ್ರಶ್ನೆ | ಉತ್ತರ |
|---|---|
| ೧) ಮನೆಯಲ್ಲಿ ಇಂದು ಯಾವ ಪದಾರ್ಥ ತಯಾರು ಮಾಡುವದಿದೆ ? | ಭಜಿ |
| ೨) ಭಜಿ ತಯಾರು ಮಾಡಲು ಯಾವ ಯಾವ ಘಟಕಗಳನ್ನು ಉಪಯೋಗ ಮಾಡಲಾಗಿದೆ ? | ಈರುಳ್ಳಿ, ಮೆಣಸಿನಕಾಯಿ, ಕಡಲೆಹಿಟ್ಟು, ಎಣ್ಣೆ, ಅಜ್ವಾನ |
| ೩) ಭಜಿ ತಿನ್ನಲು ಎಷ್ಟು ಜನರು ಇದ್ದರು ? | ನಾಲ್ಕು |
| ೪) ಭಜಿಯ ಎರಡು ಪ್ರಕಾರಗಳಲ್ಲಿ ಯಾವ ಪ್ರಕಾರದ ಭಜಿ ತಯಾರು ಮಾಡಲಾಯಿತು ? | ಮೆಣಸಿನಕಾಯಿ ಭಜಿ |
| ೫) ನೀವು ಭಜಿ ತಯಾರು ಮಾಡಲು ಯಾವ ಯಾವ ವಸ್ತುಗಳನ್ನು ಉಪಯೋಗಿಸುತ್ತೀರಿ ? | ಸಮರ್ಪಕ ಉತ್ತರ ಸ್ವೀಕರಿಸಿರಿ. |

**ಮೌಲ್ಯಮಾಪನದ ರುಬ್ರಿಕ :**

| ವಿವರಣೆ | ಶ್ರೇಣಿ |
|---|---|
| ಪರಿಚ್ಛೇದ ಓದಿದ ನಂತರ ೪ ರಿಂದ ೫ ಪ್ರಶ್ನೆಗಳಿಗೆ ಯೋಗ್ಯ ಉತ್ತರ ಕೊಡುತ್ತಾನೆ/ಳೆ. | ೩ |
| ಪರಿಚ್ಛೇದ ಓದಿದ ನಂತರ ೩ ರಿಂದ ೪ ಪ್ರಶ್ನೆಗಳಿಗೆ ಯೋಗ್ಯ ಉತ್ತರ ಕೊಡುತ್ತಾನೆ/ಳೆ. | ೨ |
| ಪರಿಚ್ಛೇದ ಓದಿದ ನಂತರ ೧ ರಿಂದ ೨ ಪ್ರಶ್ನೆಗಳಿಗೆ ಯೋಗ್ಯ ಉತ್ತರ ಕೊಡುತ್ತಾನೆ/ಳೆ. | ೧ |
| ಪ್ರಶ್ನೆಗಳಿಗೆ ಉತ್ತರ ಕೊಡುವಾಗ ಸಂಕುಚಿತಗೊಳ್ಳುತ್ತಾನೆ ಅಥವಾ ಯಾವುದೇ ಪ್ರಶ್ನೆಗಳಿಗೆ ಯೋಗ್ಯ ಉತ್ತರ ಕೊಡಲು ಸಾಧ್ಯವಾಗುವದಿಲ್ಲ. | ೦ |

**ಅಧ್ಯಯನ ನಿಷ್ಪತ್ತಿ ಕ್ರ. ೫ :** ಲೇಖನ – ಶಬ್ದ, ನಾಮಪದ, ಕ್ರಿಯಾವಾಚಕ ಶಬ್ದ ಪುನರಾವರ್ತನೆ ಉಪಯೋಗಿಸಿ ಬರೆಯುವದು.

**ಶಿಕ್ಷಕರ ಸಲುವಾಗಿ ಸೂಚನೆ :**

- ಶಿಕ್ಷಕರು ಮಕ್ಕಳಿಗೆ ಕೆಳಗಿನ ಶಬ್ದಗಳಂತೆ ಬೇರೆ ಶಬ್ದ ಬರೆಯಲು ಹೇಳಿರಿ. ಪ್ರತಿಯೊಂದು ಶಬ್ದ ಹೇಳಿದ ನಂತರ ಆ ಶಬ್ದದಲ್ಲಿ ಪುನರಾವೃತ್ತಿ ಆಗಿದ್ದ (ಪುನ: ಪುನ: ಬಂದಿದ್ದ) ಧ್ವನಿ/ಅಕ್ಷರ ಯಾವವು ಎಂಬುದನ್ನು ಕೇಳಿರಿ.
- ಪ್ರತಿಯೊಂದು ಶಬ್ದಕ್ಕೆ ಉತ್ತರ ಕೊಡುವ ಸಲುವಾಗಿ ೫ ಸೆಕೆಂದುಗಳವರೆಗೆ ಸಮಯ ಕೊಡಿರಿ.

೧) **ಮುಂದಿನ ಶಬ್ದಗಳ ಪುನರಾವೃತ್ತಿವಾಚಕ ಶಬ್ದ ಬರೆಯಿರಿ.**

**ಉದಾ. :** ಭರಭರ – ಸರಸರ

೧) ಪಟಪಟ .................... ೨) ರಪರಪ ....................

೩) ತಳಮಳ .................... ೪) ಠಣಠಣ ....................

೨) **ಮುಂದಿನ ವಾಕ್ಯಗಳಲ್ಲಿ ಕ್ರಿಯಾವಾಚಕ ಶಬ್ದಗಳ ಉಪಯೋಗ ಮಾಡಿ ವಾಕ್ಯ ಪೂರ್ಣಗೊಳಿಸಿರಿ.**

೧) ನಲಿನಿ ಹಾಡನ್ನು .................... ೨) ರೋಹಿತ ಚಿತ್ರ ....................

೩) ಸಮೀರ ಚಹಾ .................... ೪) ಸಲೀಮ ಶಾಲೆಗೆ ....................

**ಮೂಲ್ಯಮಾಪನದ ರುಬ್ರಿಕ್ :**

| ವಿವರಣೆ | ಶ್ರೇಣಿ |
|---|---|
| ಎರಡೂ ಗುಂಪುಗಳಲ್ಲಿ ಒಟ್ಟು ೮ ರಿಂದ ೬ ಕೃತಿಗಳನ್ನು ತಪ್ಪದೆ ಸರಿಯಾಗಿ ಬರೆಯುವದು. | ೩ |
| ಎರಡೂ ಗುಂಪುಗಳಲ್ಲಿ ಒಟ್ಟು ೫ ರಿಂದ ೪ ಕೃತಿಗಳನ್ನು ತಪ್ಪದೆ ಸರಿಯಾಗಿ ಬರೆಯುವದು. | ೨ |
| ಎರಡೂ ಗುಂಪುಗಳಲ್ಲಿ ಒಟ್ಟು ೩ ರಿಂದ ೨ ಕೃತಿಗಳನ್ನು ತಪ್ಪದೆ ಸರಿಯಾಗಿ ಬರೆಯುವದು. | ೧ |
| ಒಂದೂ ಉತ್ತರ ಬರೆಯುವದಿಲ್ಲ. | ೦ |

❑❑❑